**ವ್ಯಾಖ್ಯಾನ**

# ಹಣ್ಣು ಕೊಂಡನು ಬಾಲಕೃಷ್ಣನು

**ಶ್ರೀ ಪುರಂದರ ದಾಸರ ಮುಂಡಿಗೆ:**

ಹಣ್ಣು ಕೊಂಡನು ಬಾಲಕೃಷ್ಣನು || ಪ ||

ಹಣ್ಣು ಬೇಕು ಎಂದು ಸಣ್ಣ ಕೃಷ್ಣನು ಬಂದು
ಕಣ್ಣೀರ ತಂದು ಬೆಣ್ಣೆ ಕಳ್ಳ ನಿಂತ || ಅಪ ||

ದುಡುಕು ಮಾಡಿದ ಪಿಡಿ ನೆಲ್ಲನೆ ಕೊಂಡ
ಕಡುವೇಗದಿಂದ
ಮಡದಿ ಬಳಿಗೆ ಬಂದ
ಸಡಗರದಿಂದ ಪಿಡಿ ನೆಲ್ಲನ ಕೊಟ್ಟ || 1 ||

ಇಟ್ಟಳೆ ಹಣ್ಣ ಕೃಷ್ಣನ ಕೈಯಲಿ
ಇಟ್ಟಳೆ ಮತ್ತೊಂದು
ಕೊಟ್ಟಳೆ ಮುದ್ದೊಂದು
ಪಟ್ಟಳೆ ಭಯ ಬಂದು ಕಂಗೆಟ್ಟಳೆ ಮನನೊಂದು || 2 ||

ದಾತ ನೋಡಿದ ನಾರಿಮಣಿಯ ಮನವ
ಆತ ತೋರಿದ
ಎಂಥಾ ಮಾಯ ಮಾಡಿದ
ನಾಥ ಕೊಟ್ಟ ನೆಲ್ಲು ಮಣಿಗಳಾಯಿತಲ್ಲೊ || 3 ||

ತಿರುಗಿ ಪೋದನು ಮುದ್ದು ಕೃಷ್ಣನು
ತಿರುಗಿ ತಿರುಗಿ ನೋಡಿ
ಮರುಳಿಗೆ ಆಳಾಗಿ
ತಿರುಗಿ ಬಂದಳವಳು ಹಣ್ಣು ಕೂಗಿದಳು || 4 ||

ನಿನ್ನ ಹೊರತು ಅನ್ಯರನು ಕಾಣೆ
ಸಣ್ಣ ಕೃಷ್ಣ ಬಂದು
ಎನ್ನ ಸಲಹೋ ಇಂದೆ
ಘನ್ನ ಮಹಿಮ ತಂದೆ ಪುರಂದರವಿಠಲ || 5 ||

**ಈ ಹಾಡಿಗೊಂದು ಕಥಾರೂಪ:**

ಒಂದು ದಿನ ಅಜ್ಜಿಯೊಬ್ಬಳು ನಂದಗೋಕುಲಕ್ಕೆ ಹಣ್ಣುಮಾರಲು ಬರುತ್ತಾಳೆ. ಅವಳು ಗೋಕುಲದ ಬೀದಿಗಳಲ್ಲಿ ಹಣ್ಣಿನ ಬುಟ್ಟಿಹೊತ್ತು ಎಷ್ಟು ತಿರುಗಾಡಿದರೂ ಹಣ್ಣು ಕೊಳ್ಳಲು ಯಾರೂ ಬರುವುದಿಲ್ಲ. ಎಲ್ಲರೂ ಹಣ್ಣು ಬೇಡ ಎನ್ನುವವರೇ !!!.

ಕೃಷ್ಣನ ಮನೆಯ ಬಳಿ ಬರುತ್ತಾಳೆ. "ಹಣ್ಣು ಬೇಕೇ ಹಣ್ಣು" ಎಂದು ಜೋರಾಗಿ ಕೂಗುತ್ತಾಳೆ. ಆ ಧ್ವನಿಯನ್ನು ಕೇಳಿ ಪುಟ್ಟ ಕೃಷ್ಣನು ಹಣ್ಣು,ನನಗೆ ಕೊಡುವೆಯಾ ಎಂದು ಕೇಳುತ್ತಾನೆ. ಕೃಷ್ಣನು “ಅಜ್ಜಿ ಅಮ್ಮ ಹೊರಗೆ ಹೋಗಿದ್ದಾಳೆ, ನನ್ನ ಬಳಿ ಹಣ್ಣು ಕೊಂಡುಕೊಳ್ಳಲು ಹಣವೂ ಇಲ್ಲ. ಆದರೆ ನಾನು ಹಣ್ಣನ್ನು ತಿನ್ನಲೇಬೇಕು ಅಜ್ಜಿ” ಎಂದು ಹೇಳುತ್ತಾನೆ. ಆಗ ತಾಯಿ ಯಶೋದೆಯು ತನಗೆ ಒಮ್ಮೆ ಹೇಳಿದ್ದ ಮಾತನ್ನು ನೆನೆದು, ಅಜ್ಜಿ, “ನನ್ನ ಅಮ್ಮ ಹೇಳುತ್ತಿದ್ದಳು, ನಿನಗೆ ಏನಾದರೂ ಬೇಕೆಂದರೆ ನನ್ನ ಮಡಿಲಲ್ಲಿ ಕುಳಿತು ಪ್ರೀತಿಯಿಂದ ಕೇಳು, ನಿನಗೆ ಕೊಡುವೆ” ಎಂದು. ಹಾಗಾದರೆ ನಾನು ನಿನ್ನ ಮಡಿಲಿನಲ್ಲಿ ಕುಳಿತು ಪ್ರೀತಿಯಿಂದ ಹಣ್ಣು ಕೇಳುತ್ತೇನೆ ಎಂದು ಅವಳ ತೊಡೆಯ ಮೇಲೆ ಕುಳಿತು "ಅಜ್ಜಿ ಹಣ್ಣು ಕೊಡು" ಎಂದು ಕೇಳುತ್ತಾನೆ.

ಆ ಅಜ್ಜಿಯು ಅವನನ್ನು ಅಪ್ಪಿಕೊಂಡು ಆನಂದ ಭಾಷ್ಪ ಸುರಿಸುತ್ತಾಳೆ. ಅದನ್ನು ಕಂಡು ಕೃಷ್ಣನು ಏಕೆ ಅಜ್ಜಿ ನಾನು ನಿನ್ನ ಮಡಿಲಲ್ಲಿ ಕುಳಿತಿದ್ದು ನಿನಗೆ ಇಷ್ಟವಾಗಲಿಲ್ಲವೇ? ಏಕೆ ಈ ಕಣ್ಣೀರು? ಎಂದು ಕೇಳುತ್ತಾನೆ. ಅಜ್ಜಿ ಕೃಷ್ಣನ ಮುಂಗುರುಳನ್ನು ಸವರಿ, ಹಾಗೂ ಮಕ್ಕಳೇ ಇಲ್ಲದ ನನಗೆ ಈ ಕ್ಷಣದಲ್ಲೇ ಎಂತಹ ವಾತ್ಸಲ್ಯ ತೋರಿ, ನನ್ನನ್ನು ಒಬ್ಬ ತಾಯಿಯನ್ನಾಗಿ ಮಾಡಿದೆ. ನೀನು ಸಾಮಾನ್ಯ ಬಾಲಕನಲ್ಲ, ನೀನು ಸಾಕ್ಷಾತ್ ಭಗವಂತನೇ ಆಗಿದ್ದೀಯಾ, ನಾನೆಷ್ಟು ಧನ್ಯಳು ನಿನ್ನ ಸಾನ್ನಿಧ್ಯವನ್ನು ಪಡೆಯಲು ಎಂದು ಆನಂದ ಭಾಷ್ಪ ಸುರಿಸಿ ಕೃಷ್ಣನನ್ನು ಮುದ್ದಾಡುತ್ತಾಳೆ. ಅವನ ಎರಡು ಕೈಗಳಿಗೂ ಹಣ್ಣು ಕೊಟ್ಟು ಅವನ ವಸ್ತ್ರದಲ್ಲಿ ತುಂಬಿಸಿ ತಿನ್ನು ಕಂದ, ನೀನು ತೋರಿದ ಪುತ್ರ ವಾತ್ಸಲ್ಯವೇ ಸಾಕು, ನನ್ನ ಈ ಜನ್ಮ ಸಾರ್ಥಕವಾಯಿತು ಎಂದು ಹೇಳುತ್ತಾಳೆ.

ಆಗ ಕೃಷ್ಣನು “ಅಜ್ಜಿ ಇರು ನಾನು ನಿನಗೇನಾದರೂ ಧಾನ್ಯ ಕೊಡುತ್ತೇನೆ” ಎಂದು ಹೇಳಿ, “ಅಜ್ಜಿ ನನ್ನ ಅಮ್ಮ ಹೇಳುತ್ತಾಳೆ, ಯಾರಾದರೂ ಕಷ್ಟಲ್ಲಿದ್ದರೆ ಅವರಿಂದ ನಾವು ಯಾವುದನ್ನೂ ಹಾಗೆಯೇ ಪಡೆಯಬಾರದು” ಎಂದು. ಹೀಗೆ ಹೇಳಿ ಆ ಪುಟ್ಟ ಕೃಷ್ಣನು ಮನೆಯೊಳಗೆ ಹೋಗಿ ತನ್ನ ಬೊಗಸೆಯಲ್ಲಿ

ಭತ್ತವನ್ನು ತುಂಬಿಕೊಂಡು ಬರುತ್ತಾನೆ. ಆದರೆ ಅವನು ಅಜ್ಜಿಯ ಹತ್ತಿರ ಬರುವಷ್ಟರಲ್ಲಿ ಅವನ ಬೊಗಸೆಯಲ್ಲಿ ಕೇವಲ ಕೆಲವು ಕಾಳುಗಳು ಮಾತ್ರ ಉಳಿದಿರುತ್ತವೆ. ಆಗ ಅಜ್ಜಿಯು ಅದನ್ನೇ ತನ್ನ ಸೆರಗಿನಲ್ಲಿ ಕಟ್ಟಿಕೊಂಡು ಮನೆಗೆ ಹೋಗುತ್ತಾ ಆ ಮುದ್ದು ಮುಖದ ಚೆಲುವ ಕೃಷ್ಣನನ್ನು ನೆನೆಸಿಕೊಂಡು ಯಾವುದೋ ಅನಿರ್ವಚನೀಯ ಸಂಬಂಧವನ್ನು ಹೊಂದಿರುವಂತೆ ಸಂತೋಷದಿಂದ ಮನೆಯನ್ನು ತಲುಪುತ್ತಾಳೆ.

ಹಣ್ಣಿನ ಬುಟ್ಟಿಯನ್ನು ಇಳಿಸಿ ಕೈಕಾಲು ಮುಖ ತೊಳೆದುಕೊಂಡು ಬಂದು ಮುಖ ಒರೆಸಲು ಸೊಂಟಕ್ಕೆ ಸಿಕ್ಕಿಸಿದ್ದ ಸೆರಗನ್ನು ತೆಗೆದಳು. ಆಗ ಅದರಲ್ಲಿ ಕೃಷ್ಣನು ಕೊಟ್ಟಿದ್ದ ಭತ್ತವಿತ್ತು. ಅದನ್ನು ತೆಗೆದು, ಪುಟ್ಟ ಕೈಯಲ್ಲಿ ಕೃಷ್ಣ (ಕಂದ) ಕೊಟ್ಟಿದ್ದಾನೆ ಎಂದು ತನ್ನಲ್ಲೇ ಹೇಳಿಕೊಂಡು ಆ ಭತ್ತದ ಕಾಳನ್ನು ಅಲ್ಲೇ ಇದ್ದ ಒಂದು ತಟ್ಟೆಯಲ್ಲಿ ಹಾಕುತ್ತಾಳೆ. ನೋಡು ನೋಡುತ್ತಿರುವಂತೆ ಆ ಭತ್ತದ ಕಾಳುಗಳು ಅಮೂಲ್ಯವಾದ ಮುತ್ತು ರತ್ನಗಳಾಗಿ ತಟ್ಟೆ ತುಂಬಿ ಸುತ್ತಲೂ ಚೆಲ್ಲಿತು. ಆಶ್ಚರ್ಯದಿಂದ ನೋಡುತ್ತಿದ್ದ ಅಜ್ಜಿಯು ಮೂಕವಿಸ್ಮಿತಳಾಗುತ್ತಾಳೆ. ಇದೇನು ಭಗವಂತನ ಲೀಲೆ, ನನ್ನ ಮಡಿಲಲ್ಲಿ ಕುಳಿತು ಪುತ್ರವಾತ್ಸಲ್ಯ ತುಂಬಿದ. ಈಗ ನೋಡಿದರೆ ಅವನು ಕೊಟ್ಟ ಭತ್ತದ ಕಾಳುಗಳಿಂದ ನನ್ನ ಬಡತನವನ್ನು ನಿವಾರಿಸಿದ್ದಾನೆ.

ಹೀಗೆ ಶ್ರೀಕೃಷ್ಣನನ್ನು ಭಕ್ತಿಯಿಂದ ಆರಾಧಿಸುತ್ತಾ ಅವನ ಮಹಿಮೆಯನ್ನು ಹೊಗಳುತ್ತಾ ಅವಳಂತೆ ಬಡವರಾಗಿದ್ದ ಅಕ್ಕಪಕ್ಕದವರಿಗೆ ಸಹಾಯ ಮಾಡಿಕೊಂಡು ಅಜ್ಜಿ ನೆಮ್ಮದಿಯಿಂದ ಇದ್ದಳು. ಹೀಗೆ ಪರಮಾತ್ಮನಾದ ಕೃಷ್ಣನು ಮಕ್ಕಳಿಲ್ಲದ ಆ ಬಡ ಅಜ್ಜಿಗೆ ಮಾತೃ ವಾತ್ಸಲ್ಯದ ಸಿಂಚನವನ್ನು ಹರಿಸಿ ಅಜ್ಜಿಯ ಬಡತನವನ್ನು ನಿವಾರಿಸಿದನು. ಹರಿದಾಸರು ಹೇಳಿದಂತೆ "ನಂಬಿದವರ ಕೈಬಿಡುವುದಿಲ್ಲ" ನಮ್ಮ ಪುರಂದರ ವಿಠಲನು, ಅವನ ಮಹಿಮೆ ಎಷ್ಟು ಹೊಗಳಿದರೂ ಸಾಲದು.

**ಶ್ರೀ ಪುರಂದರ ದಾಸರ ಮುಂಡಿಗೆಯ ಚಿಂತನೆ:**

**ಪೀಠಿಕೆ:**

ಶ್ರೀ ಪುರಂದರದಾಸರ "ಹಣ್ಣು ಕೊಂಡನು ಬಾಲಕೃಷ್ಣನು" ಕೀರ್ತನೆಯು ಕೇವಲ ಒಂದು ಲೌಕಿಕ ಘಟನೆಯ ವರ್ಣನೆಯಲ್ಲ. ಇಲ್ಲಿ ಹಣ್ಣು ಮಾರುವ ಅಜ್ಜಿ ಒಬ್ಬ ಸಾಮಾನ್ಯ ವ್ಯಾಪಾರಿಯಲ್ಲ, ಅವಳು ಮುಕ್ತಿಯನ್ನು ಹಂಬಲಿಸುವ ಸಾಧಕ – ಚೇತನದ ಸಂಕೇತ.

ಈ ಕೀರ್ತನೆಯ ಕುರಿತಾದ ಅಧ್ಯಾತ್ಮಿಕ ವಿಶ್ಲೇಷಣೆಗೆ ಕೆಲವು ಮಹತ್ತರವಾದ, ಸ್ವಾರಸ್ಯಕರವಾದ ಮತ್ತು ಗಹನವಾದ ವಿಚಾರಗಳು ಅಡಗಿವೆ. ಈ ಕೃತಿಯು ದ್ವೈತ ಸಿದ್ಧಾಂತದ 'ಬಿಂಬ-ಪ್ರತಿಬಿಂಬ' ಭಾವ ಮತ್ತು 'ಭಕ್ತ-ಭಗವಂತ'ರ ಸಂಬಂಧವನ್ನು ಕಥಾರೂಪದಲ್ಲಿ ಇರುವ ಚಿಂತನೆಯಾಗಿದೆ. ಇಲ್ಲಿ

ದಾಸರು ಈ ಅದ್ಭುತ ಕೀರ್ತನೆಯಲ್ಲಿ ಜೀವಾತ್ಮ ಮತ್ತು ಪರಮಾತ್ಮನ ನಡುವಿನ ಮಧುರ ಸಂಬಂಧವನ್ನು ** ವಾತ್ಸಲ್ಯ ಭಕ್ತಿ **ಯ ಮೂಲಕ ವರ್ಣಿಸಿದ್ದಾರೆ.

**ಹಣ್ಣು ಕೊಂಡನು ಬಾಲಕೃಷ್ಣನು || ಪಲ್ಲವಿ ||**
**ಹಣ್ಣು ಬೇಕು ಎಂದು ಸಣ್ಣ ಕೃಷ್ಣನು ಬಂದು**
**ಕಣ್ಣೀರ ತಂದು ಬೆಣ್ಣೆ ಕಳ್ಳ ನಿಂತ || ಅನುಪಲ್ಲವಿ ||**

ಇಡೀ ಜಗತ್ತನ್ನೇ ಸಲಹುವ, ವೈಕುಂಠದ ಒಡೆಯನಾದ ಶ್ರೀಕೃಷ್ಣನು ಒಬ್ಬ ಸಾಮಾನ್ಯ ಬಾಲಕನಂತೆ ಹಣ್ಣಿಗಾಗಿ ಹಂಬಲಿಸುತ್ತಿದ್ದಾನೆ. "ಕಣ್ಣೀರ ತಂದು" ಎಂದರೆ ಆತನು ಹಣ್ಣಿಗಾಗಿ ಮಗುವಿನಂತೆ ಅಳುವ ನಟನೆಯನ್ನು ಮಾಡುತ್ತಿದ್ದಾನೆ. ಬೆಣ್ಣೆಗಳ್ಳನಾದ ಕೃಷ್ಣನು ಇಲ್ಲಿ ಅಜ್ಜಿಯ ಪ್ರೇಮವನ್ನು ಕದಿಯಲು ಬಂದಿದ್ದಾನೆ. ಭಗವಂತನು ಭಕ್ತನ ಬಳಿಗೆ ದೀನನಾಗಿ ಬರುವುದು ಅವನ ಕಾರುಣ್ಯದ ಪರಮಾವಧಿ. ಇದು ಅವನ ಲೀಲೆಗಳಲ್ಲಿ ಒಂದು.

ಇಲ್ಲಿ ಹಣ್ಣು ಮಾರುವ ಅಜ್ಜಿ ಎಂದರೆ ಸಂಸಾರದಲ್ಲಿ ಅಲೆದಾಡುತ್ತಿರುವ ಜೀವಾತ್ಮನ ಸಂಕೇತ. ಹಾಗೂ ಅಜ್ಜಿಯ ವೃದ್ಧಾಪ್ಯ - ವೈರಾಗ್ಯದ ಸಂಕೇತ. ಅಂದರೆ ಜೀವನ ಎಲ್ಲಾ ಆಸೆ-ಆಮಿಷಗಳು ಮುಗಿದು, ಲೌಕಿಕ ವ್ಯಾಮೋಹಗಳು ಅಳಿದು, ಕೇವಲ ಭಗವಂತನ ಸಾನ್ನಿಧ್ಯವನ್ನು ಹಂಬಲಿಸುವ ವೈರಾಗ್ಯದ ಸ್ಥಿತಿ.

ಅವಳ ಬುಟ್ಟಿಯಲ್ಲಿರುವ ಹಣ್ಣುಗಳು (ಗಿಡದ ಅಂತಿಮವಾದ, ಪಕ್ವವಾದ ಫಲ) ಜೀವಾತ್ಮನು ಜನ್ಮಜನ್ಮಾಂತರಗಳಿಂದ ಸಂಪಾದಿಸಿದ ಪರಿಪಕ್ವವಾದ ಜ್ಞಾನದ ಸಂಕೇತ. ಅಂತಿಮವಾಗಿ ಭಕ್ತಿಯನ್ನು ಗುರುತಿಸಿ ಭಕ್ತಿಯನ್ನು ಸ್ವೀಕರಿಸುವವನು ಆ ಶ್ರೀಹರಿ ಒಬ್ಬನೇ.

ಭಕ್ತಿಗಿಂತ ದೊಡ್ಡದು ಯಾವುದೂ ಇಲ್ಲ. ಪರಮಾತ್ಮನು ಹಣ್ಣಿನ ರುಚಿಗಾಗಿ ಅಥವಾ ಅಜ್ಜಿಯ ಬುಟ್ಟಿಗಾಗಿ ಬರಲಿಲ್ಲ, ಆಕೆಯ ನಿಷ್ಕಲ್ಮಶ ಪ್ರೇಮಕ್ಕಾಗಿ, ಅವಳ ಭಕ್ತಿಗಾಗಿ ಬಂದನು. "ಪತ್ರಂ ಪುಷ್ಪಂ ಫಲಂ ತೋಯಂ" ಎಂಬ ಗೀತಾ ವಾಕ್ಯದಂತೆ, ಭಕ್ತರು ನೀಡುವ ಅಲ್ಪ ಕಾಣಿಕೆಯೂ ದೇವರಿಗೆ ಮಹತ್ತರವಾದುದು.

ಅಜ್ಜಿಯು ತನ್ನ ಬುಟ್ಟಿಯಲ್ಲಿದ್ದ ಎಲ್ಲವನ್ನೂ ಕೃಷ್ಣನಿಗೆ ನೀಡುತ್ತಾಳೆ. ಇದು 'ಸರ್ವಸ್ವ ಸಮರ್ಪಣೆ'. ನಾವು ನಮ್ಮ ಕರ್ಮಫಲಗಳನ್ನು ಶರಣಾಗತಿಯ ಭಾವದಿಂದ ದೇವರಿಗೆ ಅರ್ಪಿಸಿದಾಗ, ಆತನು ನಮ್ಮ ಜೀವನದ ಬುಟ್ಟಿಯನ್ನು ರತ್ನಗಳಿಂದ (ಸುಜ್ಞಾನದಿಂದ) ತುಂಬಿಸುತ್ತಾನೆ.

**ದುಡುಕು ಮಾಡಿದ ಪಿಡಿ ನೆಲ್ಲನೆ ಕೊಂಡ**

**ಕಡುವೇಗದಿಂದ ಮಡದಿ ಬಳಿಗೆ ಬಂದ**
**ಸಡಗರದಿಂದ ಪಿಡಿ ನೆಲ್ಲನ ಕೊಟ್ಟ || ೧ ||** **(ಅಲ್ಪ ಅರ್ಪಣೆ - ಮಹತ್ತರ ಸ್ವೀಕಾರ)**

ಕೃಷ್ಣನು ಮನೆಯೊಳಗಿಂದ ಒಂದು ಹಿಡಿ ಭತ್ತವನ್ನು (ನೆಲ್ಲು) ತರುತ್ತಾನೆ. ಆತನು ಬರುವ ಆತುರದಲ್ಲಿ (ಕಡುವೇಗದಲ್ಲಿ) ಆ ಪುಟ್ಟ ಕೈಗಳಿಂದ ಅರ್ಧಕ್ಕಿಂತ ಹೆಚ್ಚು ಧಾನ್ಯ ಉದುರಿ ಹೋಗಿರುತ್ತದೆ. ಇದು ಸಾಧಕನು ಭಗವಂತನಿಗೆ ನೀಡುವ ** ಅಲ್ಪ ಭಕ್ತಿ **ಯ ಸಂಕೇತ. ನಮ್ಮ ಸಾಧನೆಯಲ್ಲಿ ಭಕ್ತಿ ಅಥವಾ ಜ್ಞಾನವು ಎಷ್ಟೇ ಅಲ್ಪವಾಗಿದ್ದರೂ, ಎಷ್ಟೇ ಲೋಪದೋಷಗಳಿದ್ದರೂ (ಉದುರಿಹೋದ ಕಾಳುಗಳು), ಕೃಷ್ಣನು ಬಹಳ ಸಡಗರದಿಂದ, ಅದನ್ನು ಪವಿತ್ರವೆಂದು ಪರಿಗಣಿಸಿ ಉತ್ಸಾಹದಿಂದ ಆ ಅಲ್ಪ ಕಾಣಿಕೆಯನ್ನೇ (ಧಾನ್ಯ) ಅಜ್ಜಿಗೆ (ಮಡದಿ/ನಾರಿ) ನೀಡುತ್ತಾನೆ. ದೇವರು ನೋಡುವುದು ವಸ್ತುವಿನ ಬೆಲೆಯನ್ನಲ್ಲ, ಭಕ್ತನ ಅಂತರಂಗದ ಸಡಗರವನ್ನು, ಭಕ್ತನ ಸರ್ವ ಸಮರ್ಪಣಾ ಭಾವವನ್ನು ಮತ್ತು ಸಂಪೂರ್ಣ ಶರಣಾಗತಿಯನ್ನು.

**ಇಟ್ಟಳೆ ಹಣ್ಣ ಕೃಷ್ಣನ ಕೈಯಲಿ**
**ಇಟ್ಟಳೆ ಮತ್ತೊಂದು ಕೊಟ್ಟಳೆ ಮುದ್ದೊಂದು**
**ಪಟ್ಟಳೆ ಭಯ ಬಂದು ಕಂಗೆಟ್ಟಳೆ ಮನನೊಂದು || ೨ ||** **(ಭಕ್ತನ ಪರವಶತೆ)**

ಅಜ್ಜಿಯು ಕೃಷ್ಣನ ಮುದ್ದು ರೂಪಕ್ಕೆ ಮರುಳಾಗಿ ಒಂದು ಹಣ್ಣನ್ನು ಕೊಡುತ್ತಾಳೆ. ಸಾಲದೆಂಬಂತೆ ಮತ್ತೊಂದನ್ನು ಕೊಡುತ್ತಾಳೆ. ಇಲ್ಲಿ 'ಮುದ್ದೊಂದು ಕೊಟ್ಟಳೆ' ಎಂಬುದು **ವಾತ್ಸಲ್ಯ ಭಕ್ತಿ**ಯ ಪರಾಕಾಷ್ಠೆ. ಅವಳಿಗೆ ಅವನು ದೇವರು ಎಂಬ ಅರಿವಿಗಿಂತ ತನ್ನ ಮಗ ಎಂಬ ಮಮತೆ ಹೆಚ್ಚಾಗುತ್ತದೆ. ಆದರೆ, ಆ ಕ್ಷಣದಲ್ಲೇ ಅವಳಿಗೆ ಒಂದು ರೀತಿಯ "ಭಯ" ಮತ್ತು "ಕಂಗೆಟ್ಟು" (ಬೆರಗು) ಉಂಟಾಗುತ್ತದೆ. ಸಾಕ್ಷಾತ್ ಪರಮಾತ್ಮನೇ ತನ್ನ ಮುಂದೆ ನಿಂತಿದ್ದಾನೆ ಎಂಬ ದಿವ್ಯ ಸಂವೇದನೆಯಿಂದ ಅವಳ ಮನಸ್ಸು ಪರವಶವಾಗುತ್ತದೆ.

ಕಥೆಯಲ್ಲಿ ಬರುವಂತೆ, ಕೃಷ್ಣನು ಅಜ್ಜಿಯ ಮಡಿಲಲ್ಲಿ ಕುಳಿತು ಅವಳನ್ನು ತಾಯಿಯನ್ನಾಗಿ ಮಾಡಿದನು. ಈ ಅಜ್ಜಿಗೆ ಕೃಷ್ಣನೇ ಹದಿನಾಲ್ಕು ಲೋಕಗಳ ಒಡೆಯನೆಂದು ಅರಿವಿಲ್ಲದೆ ಅವನನ್ನು ತನ್ನ ಮಡಿಲಲ್ಲಿ ಕೂಡಿಸಿಕೊಂಡು ಮುದ್ದಿಸುತ್ತಾಳೆ. ಇಲ್ಲಿ ನಾವು ಶ್ರೀ ಪುರಂದರ ದಾಸರ ಹಾಡು "ಜಗದುದ್ಧಾರನ ಆಡಿಸಿದಳೆಶೋದೆ ...." ನೆನಪಿಸಿಕೊಳ್ಳಬಹುದು. ಇದು ದ್ವೈತ ಸಿದ್ಧಾಂತದ 'ಬಿಂಬ-ಪ್ರತಿಬಿಂಬ' ಭಾವದ ದ್ಯೋತಕ.

ಅಂದರೆ, ಭಕ್ತನು ದೇವರಿಗಾಗಿ ಹಂಬಲಿಸಿದರೆ, ದೇವರು ತಾನೇ ಭಕ್ತನ ಬಳಿಗೆ ನಡೆದು ಬರುತ್ತಾನೆ. "ಒಮ್ಮೆ ನೆನೆದರೆ ಭುಕ್ತಿ, ಒಮ್ಮೆ ನೆನೆದರೆ ಮುಕ್ತಿ" ಎಂಬುದು ದಾಸರ ಅನುಭವದ ಮಾತು. ದೇವರನ್ನು ನಂಬಿದವರನ್ನು ಎಂದೆಂದಿಗೂ ಕೈ ಬಿಡುವುದಿಲ್ಲವೆನ್ನುವ ಭಾವ.

**ದಾತ ನೋಡಿದ ನಾರಿಮಣಿಯ ಮನವ**
**ಆತ ತೋರಿದ ಎಂಥಾ ಮಾಯ ಮಾಡಿದ**
**ನಾಥ ಕೊಟ್ಟ ನೆಲ್ಲು ಮಣಿಗಳಾಯಿತಲ್ಲೊ || ೩ ||**

**(ಪವಾಡ - ಲೌಕಿಕದ ಪಾರಮಾರ್ಥಿಕ ಪರಿವರ್ತನೆ)**

"ದಾತ" ಎಂದರೆ ಎಲ್ಲವನ್ನೂ ನೀಡುವವನು. ಅಂತಹ ದಾತನು ಅಜ್ಜಿಯ ನಿಷ್ಕಲ್ಮಶ ಮನಸ್ಸನ್ನು ನೋಡಿದನು. ಆತನು ಮಾಡಿದ ಮಾಯೆ ಎಂತಹದ್ದೆಂದರೆ, ಅವನು ಕೊಟ್ಟ ಆ ಅಲ್ಪ ಭತ್ತದ ಕಾಳುಗಳು ಬೆಲೆಬಾಳುವ ಮುತ್ತು-ರತ್ನಗಳಾಗಿ (ಮಣಿಗಳು) ಬದಲಾದವು.

ಭತ್ತವು ನಶ್ವರವಾದ ಆಹಾರ. ಅದು ಹೊಟ್ಟೆಯನ್ನು ತುಂಬಿಸಬಹುದು, ಆದರೆ ಆತ್ಮವನ್ನಲ್ಲ. ಕೃಷ್ಣ ಕೊಟ್ಟ ರತ್ನಗಳು 'ಅವಿನಾಶಿ' (ನಾಶವಾಗದವು). ಭಗವಂತನು ಅಜ್ಜಿಗೆ ನಶ್ವರವಾದ ಸುಖಗಳ ಬದಲಿಗೆ, ಎಂದಿಗೂ ನಾಶವಾಗದ 'ಸ್ವರೂಪಾನಂದ' ಅಥವಾ 'ಮೋಕ್ಷ' ಎಂಬ ರತ್ನಗಳನ್ನು ನೀಡಿದನು. ನಾವು ದೇವರಿಗಾಗಿ ಮಾಡುವ ಅಲ್ಪ ಸಮರ್ಪಣೆಯು, ಅನಂತವಾಗಿ ನಮಗೆ ಮರಳಿ ಬರುತ್ತದೆ ಎಂಬುದು ಇಲ್ಲಿನ ಸತ್ಯ.

**ತಿರುಗಿ ಪೋದನು ಮುದ್ದು ಕೃಷ್ಣನು**
**ತಿರುಗಿ ತಿರುಗಿ ನೋಡಿ ಮರುಳಿಗೆ ಆಳಾಗಿ**
**ತಿರುಗಿ ಬಂದಳವಳು ಹಣ್ಣು ಕೂಗಿದಳು || ೪ ||** **(ದೈವೀ ವ್ಯಾಮೋಹ)**

ಕೃಷ್ಣನು ಹಣ್ಣು ಪಡೆದು ಹೊರಟುಹೋದರೂ ಅಜ್ಜಿಯ ಮನಸ್ಸು ಅವನಲ್ಲೇ ಉಳಿಯುತ್ತದೆ. ಒಮ್ಮೆ ಭಗವಂತನ ದರ್ಶನದ ರುಚಿ ಕಂಡವರಿಗೆ ಲೌಕಿಕ ಪ್ರಪಂಚವು ಶೂನ್ಯವೆನಿಸುತ್ತದೆ. ಅವಳು ಆ "ಮರುಳಿಗೆ" (ದೈವೀ ಉನ್ಮಾದಕ್ಕೆ) ಆಳಾಗಿ, ಮತ್ತೆ ಮತ್ತೆ ಕೃಷ್ಣನನ್ನು ನೋಡುವ ಹಂಬಲದಿಂದ "ಹಣ್ಣು" ಎಂದು ಕೂಗುತ್ತಾ ಅವನ ಮನೆಗೇ ಬರುತ್ತಾಳೆ. ಅಜ್ಜಿಗೆ ತನ್ನ ಹಣ್ಣುಗಳು ಮಾರಾಟವಾಗಿ ಹಣ ಬರಬೇಕೆಂಬ ಆಸೆಗಿಂತ, ಆ ಮುದ್ದು ಕೃಷ್ಣನಿಗೆ ಅವುಗಳನ್ನು ಕೊಡಬೇಕೆಂಬ ಹಂಬಲ ಹೆಚ್ಚಾಗಿತ್ತು. ಇದು ಸಾಧಕನಿಗೆ ಇರಬೇಕಾದ 'ನಿಷ್ಕಾಮ ಕರ್ಮ'ದ ದಾರಿ. ಸಾಧಕನಿಗೆ ಭಗವಂತನ ದರ್ಶನ ಒಮ್ಮೆ ದೊರೆತರೆ, ಮತ್ತೆ ಮತ್ತೆ ಅವನನ್ನೇ ಕಾಣಬೇಕೆಂಬ ಹಂಬಲ ಉಂಟಾಗುತ್ತದೆ ಎಂಬುದಕ್ಕೆ ಇದು ನಿದರ್ಶನ.

**ನಿನ್ನ ಹೊರತು ಅನ್ಯರನು ಕಾಣೆ ಸಣ್ಣ ಕೃಷ್ಣ ಬಂದು**
**ಎನ್ನ ಸಲಹೋ ಇಂದೆ**
**ಘನ್ನ ಮಹಿಮ ತಂದೆ ಪುರಂದರವಿಠಲ || ೫ ||** **(ಶರಣಾಗತಿ ಮತ್ತು ಫಲಶ್ರುತಿ)**

ಅಂತಿಮವಾಗಿ ಪುರಂದರದಾಸರು ಅಜ್ಜಿಯ ಪರವಾಗಿ (ಮತ್ತು ನಮ್ಮೆಲ್ಲರ ಪರವಾಗಿ) ಪ್ರಾರ್ಥಿಸುತ್ತಾರೆ: "ಕೃಷ್ಣಾ, ನಿನ್ನನ್ನು ಬಿಟ್ಟರೆ ನನಗೆ ಈ ಲೋಕದಲ್ಲಿ ಅನ್ಯರು ಯಾರೂ ಇಲ್ಲ. ಈ ಭವಸಾಗರದಿಂದ ನನ್ನನ್ನು ಸಲಹು (ರಕ್ಷಿಸು)." ಅಪಾರ ಮಹಿಮೆಯುಳ್ಳವನೂ, ನಮ್ಮ ತಂದೆಯೂ ಆದ ಪುರಂದರ ವಿಠಲನು ಭಕ್ತರ ಅಲ್ಪ ಸೇವೆಯನ್ನೂ ಮೆಚ್ಚಿ ಅವರಿಗೆ ಶಾಶ್ವತವಾದ ಮುಕ್ತಿಯನ್ನು ನೀಡುತ್ತಾನೆ ಎಂಬುದು ಈ ಕೀರ್ತನೆಯ ಸಾರ.

**ಉಪಸಂಹಾರ:**

ಒಟ್ಟಾರೆಯಾಗಿ, ಈ ಕೀರ್ತನೆಯು ** ಸಮರ್ಪಣಾ ಭಾವ **ವನ್ನು ಎತ್ತಿ ತೋರಿಸುತ್ತದೆ. ನಾವು ದೇವರಿಗೆ ನಮ್ಮಲ್ಲಿರುವ ಅಲ್ಪ ಜ್ಞಾನ ಮತ್ತು ಭಕ್ತಿಯನ್ನು ನೀಡಿದರೆ, ಅವನು ನಮಗೆ ಶಾಶ್ವತವಾದ 'ಮಹದಾನಂದ' ಕೊಡುತ್ತಾನೆ. (ಇಲ್ಲಿ ದಾಸರ "ಸುಲಭವಲ್ಲವೋ ಮಹಾನಂದ .... " ಉಲ್ಲೇಖಿಸಬಹುದು) ಕೃಷ್ಣನು ಅವಳಿಗೆ ನೀಡಿದ ಮುತ್ತು-ರತ್ನಗಳು ** ಅಪರೋಕ್ಷ ಜ್ಞಾನ **ದ ಸಂಕೇತಗಳಾಗಿವೆ. ಇದು ಪುರಂದರದಾಸರು ತಿಳಿಸುತ್ತಿರುವ ಬದುಕಿನ ಪರಮ ಸತ್ಯ.

**ಶ್ರೀ ಕೃಷ್ಣಾರ್ಪಣಮಸ್ತು**

**ಈ ಹಾಡಿನ ಕಥಾರೂಪದ ಲೇಖಕರು:** ಶ್ರೀ ಜಯಭೀಮ್ ಜೋಯಿಸ್, ಶಿವಮೊಗ್ಗ.

**ಮುಂಡಿಗೆಯ ಲೇಖಕರು:** Dr. ಅನಂತ ರಾವ್ ದಂಡಿನ್, ಬೆಂಗಳೂರು.